## ಗೊಂದಿ ಅಚ್ಚುಕಟ್ಟು ಪ್ರದೇಶದ ನಕ್ಷೆ




ಅಚ್ಚುಕಟ್ಟು ಪ್ರದೇಶದಲ್ಲಿ ಒಟ್ಟು 11 ನೀರು ಬಳಕೆದಾರರ ಸಹಕಾರ ಸಂಘಗಳಿವೆ. ಇವುಗಳ ನಿಯಮಿತ ಸಭೆ, ತರಬೇತಿ ಹಾಗೂ ಸಕ್ರಿಯ ಪಾಲ್ಗೊಳ್ಳುವಿಕೆಗೆ ಯೋಜನೆಯಲ್ಲಿ ಪ್ರೋತ್ಸಾಹ ನೀಡಲಾಗುತ್ತಿದೆ.

| ಬಳಕೆದಾರರ ಸಂಘದ ಹೆಸರು | ನದಿ ದಂಡೆ |
|---|---|
| ದೊಡ್ಡಗೊಪ್ಪೇನಹಳ್ಳಿ ನೀ.ಬ.ಸ.ಸಂ. | ಎಡದಂಡೆ |
| ಬಾರಂದೂರು ನೀ.ಬ.ಸ.ಸಂ. | ಬಲದಂಡೆ |
| ಬಾಬಳ್ಳಿ ನೀ.ಬ.ಸ.ಸಂ. | ಬಲದಂಡೆ |
| ಸೀಗೆಬಾಗಿ ನೀ.ಬ.ಸ.ಸಂ. | ಬಲದಂಡೆ |
| ಕಾಗೆ ಕೋಡಮಗ್ಗಿ ನೀ.ಬ.ಸ.ಸಂ. | ಬಲದಂಡೆ |
| ತಳ್ಳಿಕಟ್ಟೆ ನೀ.ಬ.ಸ.ಸಂ. | ಬಲದಂಡೆ |
| ಹೊಳೆಹೊನ್ನೂರು ನೀ.ಬ.ಸ.ಸಂ. | ಬಲದಂಡೆ |
| ದಾಸರಕಲ್ಲಳ್ಳಿ ನೀ.ಬ.ಸ.ಸಂ. | ಬಲದಂಡೆ |
| ನಾಗತಿಬೆಳಗಲು ನೀ.ಬ.ಸ.ಸಂ. | ಬಲದಂಡೆ |
| ಕೊಪ್ಪದೊಡ್ಡಕೆರೆ ನೀ.ಬ.ಸ.ಸಂ. | ಬಲದಂಡೆ |
| ಮೂಡಲ ವಿಠಲಪುರ ನೀ.ಬ.ಸ.ಸಂ. | ಬಲದಂಡೆ |

ಕರ್ನಾಟಕ ರಾಜ್ಯವು ಅತೀವ ನೀರಿನ ಬಿಕ್ಕಟ್ಟನ್ನು ಎದುರಿಸುತ್ತಿದೆ. ಕಾರಣ ಹೆಚ್ಚುತ್ತಿರುವ ನೀರಿನ ಬೇಡಿಕೆ. ಕೃಷಿರಂಗ ಅತಿಹೆಚ್ಚು ನೀರನ್ನು ಬಳಸುತ್ತಿರುವ ವಲಯ. ಆದರೆ ಇತ್ತಿಚಿನ ವರ್ಷಗಳಲ್ಲಿ ಕೈಗಾರಿಕೆಗಳು, ಕುಡಿಯುವ ನೀರು ಹಾಗೂ ಇನ್ನಿತರೆ ವಲಯಗಳ ಹೆಚ್ಚುತ್ತಿರುವ ನೀರಿನ ಬೇಡಿಕೆಯಿಂದಾಗಿ ಕೃಷಿ ವಲಯಕ್ಕೆ ಲಭ್ಯವಾಗಬೇಕಾದ ನೀರಿನ ಪ್ರಮಾಣದಲ್ಲಿ ಗಣನೀಯ ಇಳಿಕೆಯಾಗುತ್ತಿದೆ. ಹವಾಮಾನ ವೈಪರಿತ್ಯದಿಂದಾಗಿ ಪರಿಸ್ಥಿತಿ ಮತ್ತಷ್ಟು ವಿಷಮಗೊಳ್ಳುವುದು ನಿರೀಕ್ಷಿತ.

ಇದನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ಸರ್ಕಾರವು ಏಷ್ಯಾ ಅಭಿವೃದ್ಧಿ ಬ್ಯಾಂಕಿನ ನೆರವಿನೊಂದಿಗೆ **'ಕರ್ನಾಟಕ ಸಮಗ್ರ ಮತ್ತು ಸುಸ್ಥಿರ ಜಲ ಸಂಪನ್ಮೂಲ ನಿರ್ವಹಣೆ ಹೂಡಿಕೆ ಯೋಜನೆ'**ಯನ್ನು ಆರಂಭಿಸಿದೆ.

### ಗೊಂದಿ ಕಾಲುವೆ ಆಧುನೀಕರಣ

ಈ ಯೋಜನೆಯ ಭಾಗವಾಗಿ ಮೊದಲನೇ ಹಂತದಲ್ಲಿ ಗೊಂದಿ ಅಣೆಕಟ್ಟೆಯ ಎಡ ಮತ್ತು ಬಲದಂಡೆ ಕಾಲುವೆಗಳ ಪುನರುಜ್ಜೀವನ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಇದರ ಜೊತೆಗೆ ಕೃಷಿಯಲ್ಲಿ ನೀರಿನ ಪರಿಣಾಮಕಾರಿ ಬಳಕೆಯನ್ನು ಉತ್ತೇಜಿಸಲು ರೈತ ಕ್ಷೇತ್ರ ಪಾಠಶಾಲೆ, ಸಾಮರ್ಥ್ಯ ಬಲವರ್ಧನೆ, ಹಸಿರೆಲೆ ಗೊಬ್ಬರಗಳು ಬಳಕೆಗೆ ಆದ್ಯತೆ, ಹೆಸರು, ಅಲಸಂದೆ ಇತ್ಯಾದಿ ಬೆಳೆಗಳಿಗೆ ಪ್ರೋತ್ಸಾಹ, ತರಬೇತಿ, ಅಧ್ಯಯನ ಪ್ರವಾಸ ಮುಂತಾದ ಹಲವು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಕಾಲುವೆ ಆಧುನೀಕರಣದ ಮೂಲಕ ಗೊಂದಿ ಅಚ್ಚುಕಟ್ಟಿನಲ್ಲಿ ಕೃಷಿ ಉತ್ಪಾದನೆ ಹೆಚ್ಚಿಸುವುದು, ಕೊನೆಯ ರೈತರಿಗೂ ನೀರು ತಲುಪುವಂತೆ ಮಾಡುವುದು ಯೋಜನೆಯ ಪ್ರಮುಖ ಉದ್ದೇಶ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

ಮುಖ್ಯ ಅಭಿಯಂತರರು
ಯೋಜನಾ ಅನುಷ್ಠಾನ ಕಛೇರಿ
**ಕರ್ನಾಟಕ ನೀರಾವರಿ ನಿಗಮ ನಿಯಮಿತ,** ತುಂಗಾ ಮೇಲ್ದಂಡೆ ಯೋಜನೆ,
ಶಿವಮೊಗ್ಗ–577201

**ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ**
ಮಲವಗೊಪ್ಪ, ಶಿವಮೊಗ್ಗ–577222

**ಎಸ್.ಎಂ.ಇ.ಸಿ. ಇಂಡಿಯಾ ಪ್ರೈವೇಟ್ ಲಿಮಿಟೆಡ್**
ನಂ. 28, 1ನೇ ಅಡ್ಡರಸ್ತೆ ಬೀದಿ, ಗಾಂಧಿ ನಗರ, ಭಂಡಾರಿ
ಗ್ಯಾಸ್ ಏಜನ್ಸಿ ಎದುರು, ಶಿವಮೊಗ್ಗ–577201

KARNATAKA NEERAVARI NIGAM LTD

ADB
ASIAN DEVELOPMENT BANK

SMEC
Member of the Surbana Jurong Group

## ಕರ್ನಾಟಕ ಸಮಗ್ರ ಮತ್ತು ಸುಸ್ಥಿರ ಜಲ ಸಂಪನ್ಮೂಲ ನಿರ್ವಹಣೆ ಹೂಡಿಕೆ ಯೋಜನೆ

# ಗೊಂದಿ

## ನೀರಾವರಿ ಕಾಲುವೆ ಆಧುನೀಕರಣ



**ಅನುಷ್ಠಾನ:** ಕರ್ನಾಟಕ ನೀರಾವರಿ ನಿಗಮ ನಿಯಮಿತ

**ಸಹಯೋಗ:** ಭದ್ರಾ ಕಾಡಾ

**ನೆರವು:** ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್

**ಯೋಜನಾ ಅನುಷ್ಠಾನ ಸಹಾಯ ಸಂಸ್ಥೆ:** ಎಸ್.ಎಂ.ಇ.ಸಿ.

# ಗೋಂದಿ ನೀರಾವರಿ ಅಚ್ಚುಕಟ್ಟು

ಗೊಂದಿ ಅಣೆಕಟ್ಟೆಯನ್ನು ಭದ್ರಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ. ಭದ್ರಾ ಜಲಾಶಯದಿಂದ 14.50 ಕಿ.ಮೀ. ಕೆಳಭಾಗದಲ್ಲಿ ಹಾಗೂ ಭದ್ರಾವತಿ ಪಟ್ಟಣದಿಂದ 11.56 ಕಿ.ಮೀ., ದೂರದಲ್ಲಿರುವ ಗೊಂದಿ ಗ್ರಾಮದ ಬಳಿ ಈ ಅಣೆಕಟ್ಟು ನಿರ್ಮಾಣಗೊಂಡಿದೆ.

ನಿರ್ಮಾಣ ಕಾರ್ಯವು 1916ರಲ್ಲಿ ಆರಂಭಗೊಂಡು 1926 ರಲ್ಲಿ ಪೂರ್ಣಗೊಂಡಿದೆ. ಆಗಿನ ಕಾಲಕ್ಕೆ ತಗುಲಿದ ಅಂದಾಜು ವೆಚ್ಚ ಅಂದಾಜು 16.00 ಲಕ್ಷ ರೂ.ಗಳು.

ಅಣೆಕಟ್ಟೆಗೆ ಎರಡು ಕಾಲುವೆಗಳಿವೆ. 14.735 ಕಿ.ಮೀ., ಉದ್ದದ ಎಡದಂಡೆ ಕಾಲುವೆ ಮತ್ತು 74.24 ಕಿ.ಮೀ.,ಉದ್ದದ ಬಲದಂಡೆ ಕಾಲುವೆ. ಈ ಎರಡೂ ಕಾಲುವೆಗಳು 4600 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರುಣಿಸುತ್ತವೆ. ಸುಮಾರು 52 ಹಳ್ಳಿಗಳ 3,38,989 ಜನರು ವಿವಿಧ ರೀತಿಯಲ್ಲಿ ಈ ಅಣೆಕಟ್ಟೆಯ ಪ್ರಯೋಜನ ಪಡೆಯುತ್ತಿದ್ದಾರೆ.

ಭತ್ತ, ಕಬ್ಬು, ಅಡಿಕೆ, ಮೆಕ್ಕೆ, ಜೋಳ, ಶುಂಠಿ, ಹೆಸರು ಮುಂತಾದವು ಅಚ್ಚುಕಟ್ಟು ಪ್ರದೇಶದ ಪ್ರಮುಖ ಬೆಳೆಗಳು.




# ಕಾಲುವೆ ಆಧುನೀಕರಣ



ನೂರು ವರ್ಷಗಳ ಹಳೆಯದಾದ ಗೊಂದಿ ಎಡದಂಡೆ ಮತ್ತು ಬಲದಂಡೆ ಕಾಲುವೆಗಳು ಅತ್ಯಂತ ಶಿಥಿಲವಾಗಿವೆ. ದಡಗಳ ಕುಸಿತದಿಂದ ಹೂಳು ತುಂಬಿದ್ದು, ಅಗಲ ಹೆಚ್ಚಾಗಿದೆ. ಪರಿಣಾಮವಾಗಿ ಕಾಲುವೆಯ ಕೊನೆಯ ಹಂತಕ್ಕೆ ನೀರು ತಲುಪುವುದು ಕಷ್ಟಸಾಧ್ಯ.

ಇದನ್ನು ಸರಿಪಡಿಸುವ ಉದ್ದೇಶದಿಂದ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಅನುದಾನದಲ್ಲಿ ಗೊಂದಿ ಆಧುನೀಕರಣ ಉಪಯೋಜನೆಯನ್ನು ಜಾರಿ ಗೊಳಿಸಲಾಗುತ್ತಿದೆ. ಕಾಲುವೆಗಳ ಆಧುನೀಕರಣ, ಕೃಷಿ ಉತ್ಪಾದಕತೆ ಹೆಚ್ಚಳ, ಸಾಮಾಜಿಕ ಸಂಘಟನೆ ಹಾಗೂ ನೀರು ಬಳಕೆದಾರ ಸಂಘಗಳ ಸಾಮರ್ಥ್ಯಾಭಿವೃದ್ಧಿ ಯೋಜನೆಯ ಪ್ರಮುಖ ಚಟುವಟಿಕೆಗಳಾಗಿವೆ ಮತ್ತು ಸ್ವಯಂ ನಿರ್ವಹಣೆಗಾಗಿ ಒಕ್ಕೂಟವನ್ನು ರಚಿಸಲಾಗುತ್ತಿದೆ

ಸಿವಿಲ್ ಕಾಮಗಾರಿಗಳಲ್ಲಿ ಮುಖ್ಯನಾಲೆಗಳನ್ನು ಹಾಗೂ ಉಪ ನಾಲೆಗಳನ್ನು ಪುನರುಜ್ಜೀವನಗೊಳಿಸುವುದು, ತೂಬುಗಳ ಮರುನಿರ್ಮಾಣ, ತೂಬುಗಳಿಗೆ ದೂರಮಾಪಕ(ಟೆಲಿಮೆಟ್ರಿ) ಸಾಧನಗಳ ಅಳವಡಿಕೆ ಮುಂತಾದವುಗಳ ಅನುಷ್ಠಾನ ಸೇರಿದೆ.

ಅಚ್ಚುಕಟ್ಟು ಕಾಲುವೆಗಳ ಸಿವಿಲ್ ಕಾಮಗಾರಿಗಳನ್ನು ನೀರು ಬಳಕೆದಾರರ ಸಂಘಗಳ ಮೂಲಕವೇ ಕಾರ್ಯಗತ ಗೊಳಿಸಲಾಗುತ್ತಿದೆ.

**ಅವಧಿ: ಯೋಜನೆಯು ಡಿಸೆಂಬರ್ 2015ರಲ್ಲಿ ಆರಂಭವಾಗಿದ್ದು, ಇದರ ಒಟ್ಟು ಅವಧಿ 36 ತಿಂಗಳು**

# ಕೃಷಿ ಅಭಿವೃದ್ಧಿ ಮತ್ತು ಸಾಮರ್ಥ್ಯವರ್ಧನೆ

ಯೋಜನೆಯ ಅಂತಿಮ ಉದ್ದೇಶವೇ ನೀರಿನ ಪರಿಣಾಮಕಾರಿ ಬಳಕೆ ಮತ್ತು ಕೃಷಿ ಉತ್ಪಾದಕತೆ ಹೆಚ್ಚಳ. ಇದನ್ನು ಸಾಧಿಸಲು ರೈತ ಕ್ಷೇತ್ರ ಪಾಠಶಾಲೆಗಳ ಆಯೋಜನೆ, ಭತ್ತದಲ್ಲಿ 'ಶ್ರೀ' ಪದ್ಧತಿ ಅಳವಡಿಕೆಗೆ ಪ್ರೋತ್ಸಾಹ, ಮಿಶ್ರಬೆಳೆ ಹಾಗೂ ಸಾವಯುವ ವಿಧಾನಗಳ ಪರಿಚಯ ಮಾಡಲಾಗುತ್ತಿದೆ.

ಶಿವಮೊಗ್ಗದ ಕೃಷಿ ಹಾಗೂ ತೋಟಗಾರಿಕೆ ವಿಶ್ವವಿದ್ಯಾಲಯ, ಕೃಷಿ ವಿಜ್ಞಾನ ಕೇಂದ್ರ, ಆಹಾರ ಮತ್ತು ಕೃಷಿ ಸಂಸ್ಥೆಯ ಸಹಕಾರದೊಂದಿಗೆ ವಿವಿಧ ತರಬೇತಿಗಳನ್ನು ಹಾಗೂ ಅಧ್ಯಯನ ಪ್ರವಾಸಗಳ ಆಯೋಜನೆ ಮುಂತಾದ ಹಲವು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಪರಿಣಾಮಕಾರಿ ನೀರಿನ ಬಳಕೆಯನ್ನು ಜಾರಿಗೊಳಿಸುವ ಮೂಲಕ ಉದ್ಯೋಗವಕಾಶಗಳನ್ನು ಸೃಷ್ಟಿಸಿ, ಅಚ್ಚುಕಟ್ಟು ಪ್ರದೇಶದ ರೈತರ ಆದಾಯ ವೃಧ್ಧಿಯಾಗುವಂತೆ ಮಾಡುವುದು ಯೋಜನೆಯ ಆಶಯವಾಗಿದೆ.

